ಬೆಳೆಯತಕ್ಕಂಥ ಪ್ರದೇಶವನ್ನು ನೋಡಿದರೆ ನಮಗೆ ಭಯವಾಗುತ್ತಿದೆ. ಮುಂದಿನ ದಿನಗಳಲ್ಲಿ ಅಕ್ಕಿ ತಿನ್ನುವ ಬದಲು ಅಡಿಕೆ ತಿನ್ನತಕ್ಕಂಥ ಪರಿಸ್ಥಿತಿ ನಮ್ಮ ರಾಜ್ಯಕ್ಕೆ ಉಂಟಾಗಬಹುದು! ಇದನ್ನು ನಿಯಂತ್ರಣ ಮಾಡುವುದಕ್ಕೆ ಯೋಚನೆ ಮಾಡಬೇಕಾಗಿದೆ. ಏಕೆಂದರೆ, ಎಲ್ಲರೂ ಕೂಡ ಭತ್ತ, ಕಬ್ಬು, ಗೋಧಿ, ಜೋಳ ಮತ್ತು ಶೇಂಗಾ ಬೆಳೆಯುವುದನ್ನು ಬಿಟ್ಟು ಇವತ್ತಿನ ದಿವಸ ನೂರಾರು ಎಕರೆಗಳಲ್ಲಿ ಅಡಿಕೆ ಸಸಿಗಳನ್ನು ನೆಡುತ್ತಿದ್ದಾರೆ. ಇದರಿಂದ ಒಟ್ಟಾರೆ ಕೃಷಿ ಚಟುವಟಿಕೆಗಳಿಗೆ ಮುಂದಿನ 10 ವರ್ಷಗಳಲ್ಲಿ ದೊಡ್ಡ ಆಘಾತವಾಗಬಹುದು. ಇವತ್ತಿನ ದಿವಸ ರೈತ ತನ್ನ ಜಮೀನಿನಲ್ಲಿ ಯಾವುದಾದರೂ ಬೆಳೆಯನ್ನು ಹಾಕಿಕೊಳ್ಳುವುದಕ್ಕೆ ಆತನಿಗೆ ಸ್ವತಂತ್ರ ಇದೆ. ಆದರೂ ಕೂಡ ಈ ರೀತಿಯಾಗಿ ಅಡಿಕೆ ಬೆಳೆದರೆ ಮುಂದಿನ ದಿನಗಳಲ್ಲಿ ಈ ರೀತಿಯಾದ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಹಾಗೆಯೇ ಇವತ್ತಿನ ದಿವಸ ಕಬ್ಬಿಗೆ ಸೂಕ್ತ ಬೆಲೆ ಇಲ್ಲದೇ ಏನು ಸುಟ್ಟು ಹಾಕಿದರೋ ಅದೇ ರೀತಿ ಇದನ್ನು ಮಾಡುವಂಥ ಪರಿಸ್ಥಿತಿ ಉದ್ಭವವಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಈಗಾಗಲೇ ಎಚ್ಚರಿಕೆಯ ಕ್ರಮವನ್ನು ತೆಗೆದುಕೊಂಡಿದ್ದಾರೆಯೇ ಎಂಬುದನ್ನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯ ಸ್ವಾಭಾವಿಕವಾಗಿದೆ. ರೈತರು ಈಗಾಗಲೇ ಭತ್ತವನ್ನು ಬೆಳೆಯುವುದನ್ನು ಬಿಟ್ಟು, ತೆಂಗನ್ನು ಬೆಳೆಯುವವರು ಶಿವಮೊಗ್ಗ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಭಾಗದಲ್ಲಿ ಹೆಚ್ಚಾಗಿದ್ದಾರೆ. ಅಡಿಕೆ ಬೆಳೆಯನ್ನು ಬೆಳೆಯುವುದು ಇತ್ತೀಚಿನ ದಿನಗಳಲ್ಲಿ ಜಾಸ್ತಿಯಾಗಿದೆ. ಈಗಾಗಲೇ ತಾವು ಹೇಳಿದ ರೀತಿಯಲ್ಲಿ ಇದಕ್ಕೆ ಕಡಿವಾಣ ಹಾಕುವುದಕ್ಕೆ ಬಹಳ ಕಷ್ಟವಾಗುತ್ತದೆ. ಅದನ್ನು ನ್ಯಾಚುರಲ್ ಆಗಿ ಇಂಪೋರ್ಟ್ ಲೈಸನ್ಸ್ ಬಂದ ಮೇಲೆ ಮಾರ್ಕೆಟ್‌ನಲ್ಲಿ ಬೆಲೆ ಕಡಿಮೆಯಾದಾಗ ರೈತರು ಕೂಡ ಯೋಚನೆ ಮಾಡಬೇಕಾಗುತ್ತದೆ. ತಾವು ಹೇಳಿದಂತೆ, ತೊಂದರೆಯಾಗುವ ಲಕ್ಷಣಗಳು ಕೂಡ ಇರುತ್ತದೆ. ರೈತರು ಬೆಳೆಯುವುದಕ್ಕೆ ರಿಸ್ಟ್ರಿಕ್ಷನ್ ಹಾಕುವ ಬದಲಾಗಿ ಅದನ್ನು ಮಾರ್ಕೆಟ್‌ಮಾಡುವ ಬಗ್ಗೆ ಹೆಚ್ಚಿಗೆ ಚಿಂತನೆ ಮಾಡಬೇಕಾಗುತ್ತದೆ. ಬೇರೆ ದೇಶಗಳಲ್ಲಿ ಬೆಳೆಯುತ್ತಿರುವ ಅಡಿಕೆಗಿಂತಲೂ ನಮ್ಮಲ್ಲಿ ಬೆಳೆಯುವ ಅಡಿಕೆ ತಿನ್ನುವುದಕ್ಕೆ ವಿಶೇಷವಾಗಿರುತ್ತದೆ. ಇದರ ಬಗ್ಗೆ ಹೆಚ್ಚು ಪ್ರಚಾರ ಮಾಡುವುದರಿಂದ ಎಕ್ಸ್‌ಪೋರ್ಟ್ ಪೊಟೆನ್‌ಷಿಯಲ್ ಇದೆ, ಇದನ್ನು ಮಾಡುವುದರಿಂದ ರೈತರಿಗೆ ಹೆಚ್ಚು ಲಾಭವಾಗುತ್ತದೆ. ಈ ಎರಡು ಅಂಶಗಳೂ ಕೂಡ ಸರ್ಕಾರದ ಗಮನದಲ್ಲಿದೆ.

ಶಿರಹಟ್ಟಿ ತಾಲ್ಲೂಕಿನಲ್ಲಿ ಸಾರಿಗೆ ಸೌಲಭ್ಯ.

333(3188)

ಶ್ರೀ ಗಡ್ಡದೇವರಮಠ ಗಡ್ಡಯ್ಯ ಶಿವಮೂರ್ತಯ್ಯ(ಶಿರಹಟ್ಟಿ): ಮಾನ್ಯ ಸಾರಿಗೆ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಹಟ್ಟಿ ತಾಲ್ಲೂಕಿನಲ್ಲಿ ಬರುವ ಕೆಲವೊಂದು ಗ್ರಾಮಗಳಲ್ಲಿ ಸಮರ್ಪಕವಾದ ಬಸ್ ಸೌಲಭ್ಯ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸಮರ್ಪಕವಾದ ಬಸ್ ಸೌಲಭ್ಯ ಕೊಡಲು ಸರ್ಕಾರದ ಕ್ರಮ ಏನು?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

ಅ) ಇಲ್ಲ. ಶಿರಹಟ್ಟಿ ತಾಲ್ಲೂಕಿನಲ್ಲಿ ಒಟ್ಟು 81 ಗ್ರಾಮಗಳು ಬರುತ್ತಿದ್ದು, ಎಲ್ಲಾ ಗ್ರಾಮಗಳಿಗೆ ಕನಿಷ್ಟ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿದೆ. ಶಿರಹಟ್ಟಿ ತಾಲ್ಲೂಕಿನಲ್ಲಿ ಬರುವ ಲಕ್ಕೇಶ್ವರ ಕಂಟ್ರೋಲ್ ಪಾಯಿಂಟ್‌ದಿಂದ 274 ಟ್ರಿಪ್‌ಗಳನ್ನು ಶಿರಹಟ್ಟಿ ಕಂಟ್ರೋಲ್ ಪಾಯಿಂಟ್‌ದಿಂದ 97 ಟ್ರಿಪ್‌ಗಳನ್ನು ಹಾಗೂ ಬೆಳ್ಳಟ್ಟಿ ಬಸ್ ನಿಲ್ದಾಣದಿಂದ 73 ಟ್ರಿಪ್‌ಗಳನ್ನು ಒದಗಿಸಿ ಸಾರ್ವಜನಿಕ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದೆ.

ಆ) ಸಾರ್ವಜನಿಕರ ಬೇಡಿಕೆಗಳಿಗನುಗುಣವಾಗಿ ಹೆಚ್ಚಿನ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುವುದು.

ಶ್ರೀ ಗಡ್ಡದೇವರಮಠ, ಗಡ್ಡಯ್ಯ, ಶಿವಮೂರ್ತಯ್ಯ: ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ಶಿರಹಟ್ಟಿ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳು ಸುಮಾರು ದಿವಸಗಳಿಂದ ನಿರ್ಲಕ್ಷಿಸುವಂಥದ್ದಾಗಿದೆ ಎಂದು ಹೇಳುತ್ತಾ, ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ. ನನ್ನ ತಾಲ್ಲೂಕಿನ 81 ಗ್ರಾಮಗಳ ಪೈಕಿ ಪೂರ್ವ ಭಾಗದ ಗ್ರಾಮೀಣ ಪ್ರದೇಶಗಳಲ್ಲಿ, ಅದರಲ್ಲಿ ವಿಶೇಷವಾಗಿ ಕಂಟ್ರೋಲ್ ಪಾಯಿಂಟ್ ಏನಿದೆ, ಸುಮಾರು 60 ಕಿ.ಮೀ.ದೂರವಿರುವಂಥ ಕಲ್ಲಾಗನೂರು, ತೊಳಲಿ, ಬಾವನೂರು, ಮನೆಬಾವನೂರು, ಕುಸಲಾಪೂರ ಎನ್ನುವಂಥ ಗ್ರಾಮಗಳಿಗೆ ಸಾರಿಗೆ ಸಂಪರ್ಕಗಳು ಸಮರ್ಪಕವಾಗಿ ಇಲ್ಲ, ಅಷ್ಟೇ ಅಲ್ಲದೆ ಅಧಿಕಾರಿಗಳು ಇಲ್ಲಿ ಬಸ್ ಬಿಟ್ಟಿದ್ದಾಗಿ ತೋರಿಸುತ್ತಾರೆ. ಒಂದು ದಿವಸ ಬಸ್‌ನ್ನು ಬಿಡುತ್ತಾರೆ, ಮೂರು ದಿವಸ ಬಸ್‌ನ್ನು ಬಿಡುವುದಿಲ್ಲ, ಇಂತಹ ಒಂದು ಅವ್ಯವಸ್ಥೆ ಅಲ್ಲಿ ಕಾಣುತ್ತಿದೆ. ಅಲ್ಲಿನ ಅಧಿಕಾರಿಗಳಿಗೆ ನಾವು ಇದನ್ನು ಹೇಳುವುದಕ್ಕೆ ಹೋದರೆ ಅವರು ಏನಾದರೂ ಒಂದು ನೆಪವನ್ನು ಹೇಳುತ್ತಾರೆ. ನನ್ನ ಶಿರಹಟ್ಟಿ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರತಕ್ಕಂಥ ಸುಮಾರು 650 ಕಿ.ಮೀ.ರಸ್ತೆಯಲ್ಲಿ ಬಸ್‌ಗಳು ಸರಿಯಾಗಿ ಸಂಚರಿಸುತ್ತಿಲ್ಲ. ಆದ್ದರಿಂದ, ಮಾನ್ಯ ಸಾರಿಗೆ ಸಚಿವರು ಅಲ್ಲಿ ಅವ್ಯವಸ್ಥೆಯಾಗಿರುವುದನ್ನು ಸುವ್ಯವಸ್ಥೆ ಆಗುವಂತೆ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಗೌರವಾನ್ವಿತ ಸದಸ್ಯರು ಮಾತನಾಡುತ್ತಾ ಅವರ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಎಷ್ಟು ಸಲ ಟ್ರಿಪ್ ಹಾಕುತ್ತೇವೆ ಎನ್ನುವ ಬಗ್ಗೆ ಹೇಳಿದ್ದಾರೆ. ಶಿರಹಟ್ಟಿ ತಾಲ್ಲೂಕಿನಲ್ಲಿ ಕೆಲವು ನ್ಯೂನತೆಗಳ ಬಗ್ಗೆ ಅವರು ಏನು ಹೇಳಿದ್ದಾರೆ, ಅದನ್ನು ಸರಿಪಡಿಸುವಂಥ ಜವಾಬ್ದಾರಿ ನನ್ನದಾಗಿರುತ್ತದೆ. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ, ನಮ್ಮಲ್ಲಿ ಚಾಲಕರ ಕೊರತೆ ಇದೆ, ಅದರ ನಿವಾರಣೆ ಸಲುವಾಗಿ 600 ಚಾಲಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ನಾವು ತೀರ್ಮಾನವನ್ನೂ ತೆಗೆದುಕೊಂಡಿದ್ದೇವೆ. ಚಾಲಕರನ್ನು ನೇಮಕ ಮಾಡಿಕೊಂಡ ನಂತರ ಅಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೋಗುವುದಕ್ಕೆ ನಾನು ಅಧಿಕಾರಿಗಳಿಗೆ ಆದೇಶ ನೀಡುತ್ತೇನೆ.

ಶ್ರೀ ಗಡ್ಡದೇವರಮಠ, ಗಡ್ಡಯ್ಯ, ಶಿವಮೂರ್ತಯ್ಯ: ಕಳೆದ 6 ತಿಂಗಳುಗಳಿಂದ ನಾವು ಅಲ್ಲಿರುವ ಜನರಿಗೆ ಸಮಾಧಾನವನ್ನು ಹೇಳಿಕೊಂಡು ಬರುತ್ತಿದ್ದೇವೆ. ಆದಷ್ಟು ತೀವ್ರವಾಗಿ ಈ ವ್ಯವಸ್ಥೆಯಾಗಲಿ ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ. ನಾವು ಕೇಳಿದಾಗ ಕಂಡಕ್ಟರ್ ಹಾಗೂ ಚಾಲಕರ ಕೊರತೆ ಇರುವುದರ ಬಗ್ಗೆ ಅಲ್ಲಿನ ಅಧಿಕಾರಿಗಳು ಹೇಳಿಕೊಂಡು ಬರುತ್ತಿದ್ದಾರೆ. ಆದುದರಿಂದ ಎಷ್ಟು ದಿವಸಗಳಲ್ಲಿ ಅದನ್ನು ಸರಿಮಾಡುವುದಕ್ಕೆ ಸಾಧ್ಯವಿದೆ ಎನ್ನುವ ವಿಚಾರವನ್ನು ಅವರು ಹೇಳಬೇಕು.

ಶ್ರೀ ಸಿ.ಆರ್.ಸಗೀರ್ ಅಹಮದ್: ಅಲ್ಲಿನ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಇರುವಂಥ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಈ ತಕ್ಷಣ ನಾನು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಶ್ರೀ ಹೆಚ್.ಸಿ.ಬಸವರಾಜುರವರೆ, ಸರ್ಕಾರದವರು ನಿಮ್ಮ ಪ್ರಶ್ನೆಗೆ ಟೈಮ್ ಕೇಳಿದ್ದಾರೆ.

ಶ್ರೀ ಹೆಚ್.ಸಿ.ಬಸವರಾಜು: ಇದೇ ಅಧಿವೇಶನದಲ್ಲಿ ನನ್ನ ಪ್ರಶ್ನೆಗೆ ಉತ್ತರ ಬರುತ್ತದೆಯೇ?

ಅಧ್ಯಕ್ಷರು: ಮುಂದಿನವಾರ ಉತ್ತರ ಬರುತ್ತದೆ. They have to send it. There is no other option for them except sending the reply.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಂದ ಖರೀದಿಸಲಾದ ಬಿಡಿ ಭಾಗಗಳು.

336(2850)

ಶ್ರೀ ಎಸ್.ಅಂಗಾರ (ಸೂಳ್ಯ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?